ಚಿತ್ರರಂಗಕ್ಕೆ ಬರುವ ಕೆಲವು 'ಅಪರೂಪದ ಅತಿಥಿ'ಗಳಲ್ಲಿ ಒಬ್ಬರಾಗಿ 'ಅಪರಿಚಿತ'ರಾಗಿದ್ದ, 'ಅನಾಮಿಕ'ರಾಗಿದ್ದ ಕಾಶೀನಾಥ್ ಒಂದಷ್ಟು 'ಅನುಭವ' ಪಡೆದು ಸಿನಿಮಾ ವ್ಯಾಕರಣವನ್ನೇ ಬದಲಾಯಿಸಿದವರು.

1975– ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟಲ್ಲಿ ನಿರ್ದೇಶನ ಕಲಿಕೆಯಲ್ಲಿದ್ದಾಗ ಕಾಶೀನಾಥ್ ಕೆಲವು ಕಿರುಚಿತ್ರಗಳನ್ನು ಮಾಡಿ ಪ್ರಶಂಸೆ ಪಡೆದವರು. ನಂತರ ಗೆಳೆಯರ ಜೊತೆ ಕೂಡಿಕೊಂಡು 'ಅಪರೂಪದ ಅತಿಥಿಗಳು' ಎಂಬ ಚಿತ್ರ ನಿರ್ಮಿಸಿ ನಿರ್ದೇಶಿಸಿದರು. ಆಗ ಅವರ ಜೊತೆಗೂಡಿದವರು ನಿರ್ದೇಶಕ



ರಾಮ್‌ದಾಸ್ ನಾಯ್ಡು ಮತ್ತು ನಟ ಅರವಿಂದ್. ಆ ಚಿತ್ರದ ಮೂಲಕ ಕಾಶಿಯವರು ಛಾಯಾಗ್ರಾಹಕ ಸುಂದರ್‌ನಾಥ್ ಸುವರ್ಣ ಅವರನ್ನು ಪರಿಚಯಿಸಿದರು. 50 ಸಾವಿರ ರೂಪಾಯಿ ವೆಚ್ಚದಲ್ಲಿ ತಯಾರಾದ ಚಿತ್ರದ ಆಗಿನ ಗಳಿಕೆ 80 ಸಾವಿರ ರೂಪಾಯಿ! ಆಗ ಅದೊಂದು ದೊಡ್ಡ ಮೊತ್ತವೇ. ಈ ಯಶಸ್ಸು ಅವರಿಗೆ ಮುಂದೆ ಇನ್ನೊಂದು ಸಿನಿಮಾ ಮಾಡುವಂತೆ ಉತ್ತೇಜನ ನೀಡಿತು.

ಅಪರಿಚಿತ – ಕನ್ನಡ ಚಿತ್ರರಂಗದಲ್ಲಿ ಹೊಸ ತರಂಗ ಎಬ್ಬಿಸಿದ ಚಿತ್ರ. ಕಾಶೀನಾಥ್ ಯೋಚನೆಯೇ ವಿಭಿನ್ನ. ಈ ಚಿತ್ರದ ಚಿತ್ರಕಥೆ ಇಂದಿಗೂ ಹೊಸತನ ಉಳಿಸಿಕೊಂಡಂಥದ್ದು. ಈ ಚಿತ್ರದಲ್ಲಿ ಒಂದು ದೃಶ್ಯವಿದೆ. ನಾಯಕ ಸುರೇಶ್ ಹೆಬ್ಳೀಕರ್ ಎಸ್ಟೇಟಿಗೆ ದಾರಿ ಕೇಳುತ್ತಾರೆ. ವಾಸುದೇವರಾವ್ (ಚೋಮನ ದುಡಿ ಖ್ಯಾತಿ) ಬಳಿ ಅವರು ಹೇಳುತ್ತಿರುವಾಗಲೇ ದೃಶ್ಯದಲ್ಲಿ ನಾಯಕ ಆ ಎಸ್ಟೇಟಿಗೆ ಹೋಗುತ್ತಿರುತ್ತಾನೆ, ವಿಳಾಸ ತಲುಪುತ್ತಾನೆ. ಇದು ಚಿತ್ರಕಥೆಯ ನಿರೂಪಣೆಯಲ್ಲಿ ಹೊಸತನ. ಇನ್ನೊಂದು ದೃಶ್ಯದಲ್ಲಿ ಕೋಕಿಲ ಮೋಹನ್ ತನ್ನ ಮಲತಾಯಿಗೆ (ಶ್ರೀಲಲಿತಾ) ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುವ ರೀತಿ. ಇದೂ ವಿಭಿನ್ನವಾಗಿದೆ. 'ನೀವು ಹಣಕೊಡದಿದ್ರೆ...' ಎನ್ನುತ್ತಾ ಟೀಪಾಯಿಯ ಮೇಲೆ ತಾಳ ಹಾಕುತ್ತಾನೆ ಮಲಮಗ (ಕೋಕಿಲ ಮೋಹನ್). ಆಗ ಹಿನ್ನೆಲೆಯಲ್ಲಿ ತಮಟೆ ಸದ್ದು ಅಂದರೆ, ನಿಮ್ಮ ವಿಷಯ ಡಂಗೂರ ಸಾರ್ತೀನಿ ಎಂಬ ಮಾರ್ಮಿಕ ಬೆದರಿಕೆ. ಪ್ರತಿದೃಶ್ಯದಲ್ಲೂ ಹೊಸತನ. ಇಂತಹ ಕೆಲವು ದೃಶ್ಯಗಳು ಕಾಶಿಯವರಿಗೆ ಒಳ್ಳೆಯ ಹೆಸರು ತಂದು ಕೊಟ್ಟಿತು.

ಕಾಶಿಯವರು ತಮಗೆ ಅನಿಸಿದಾಗ ಮಾತ್ರ ಚಿತ್ರ ಮಾಡುತ್ತಿದ್ದವರು; ಯಾವ ಒತ್ತಡಕ್ಕೂ ಮಾಡುತ್ತಿರಲಿಲ್ಲ. ಕಥೆ, ಚಿತ್ರಕಥೆ ತಮಗೆ ಇಷ್ಟವಾದಾಗ, ತೃಪ್ತಿ ಕೊಟ್ಟಾಗ ಮಾತ್ರ ಶೂಟಿಂಗ್ ಶುರು ಮಾಡುತ್ತಿದ್ದರು. ಅವರು ಯಾರ ಕೈಕೆಳಗೂ ಕೆಲಸ ಮಾಡಿರಲಿಲ್ಲ. ಸ್ವತಂತ್ರವಾಗಿ ನಿರ್ದೇಶಕರಾದವರು. ಇದು ಅವರ ಸ್ವಂತ ಪ್ರತಿಭೆಗೆ ಸಾಕ್ಷಿ. ಮುಂದೆ ಅವರು 'ಅನುಭವ' ಚಿತ್ರ ತಯಾರಿಯಲ್ಲಿ ತೊಡಗಿದಾಗ ಸುಂದರ್‌ನಾಥ್ ಸುವರ್ಣ ಮತ್ತೆ ಆ ಟೀಮ್ ಜತೆಗೆ ಸೇರಿಕೊಂಡರು.

'ಅನುಭವ' ನನ್ನ ಜೀವನದಲ್ಲಿಯೂ ಒಂದು ದೊಡ್ಡ ತಿರುವು ತಂದುಕೊಟ್ಟ ಚಿತ್ರ. ಸುಂದರ್‌ನಾಥ್ ಸುವರ್ಣ ಆ ಸಮಯದಲ್ಲಿ ನಾನು ಬರೆದ ಕೆಲವು ಹಾಡುಗಳನ್ನು ಕೇಳಿ ಮೆಚ್ಚಿಕೊಂಡಿದ್ದರು. ಹೀಗಾಗಿ ಕಾಶಿಯವರಿಗೆ ನನ್ನ ಬಗ್ಗೆ ಹೇಳಿದ್ದರು. ಕಾಶಿಯವರು ನನ್ನನ್ನು ಕರೆಸಿ 'ಟ್ಯೂನ್‌ಗೆ ಹಾಡು ಬರೀತೀರೇನ್ರಿ?' ಎಂದು ಕೇಳಿದರು. 'ಬರುತ್ತೆ ಸರ್, ನಮ್ಮೂರಲ್ಲಿ ನಾಟಕಗಳಿಗೆ ಹಿಂದಿ, ತಮಿಳು ಹಾಡುಗಳ ಟ್ಯೂನ್‌ಗೆ ಕನ್ನಡದಲ್ಲಿ ಬರೆದು ಅಭ್ಯಾಸವಿದೆ' ಎಂದೆ. ಕಾಶಿಯವರು 'ಅನುಭವ' ಚಿತ್ರದ ಕಥೆ, ಹಾಡಿನ ಸನ್ನಿವೇಶ ತಿಳಿಸಿದರು. ನಾನು ಗುರುತು ಹಾಕಿಕೊಂಡು ಸಂಗೀತ ನಿರ್ದೇಶಕ ಎಲ್. ವೈದ್ಯನಾಥನ್ ಅವರು ಹಾಡಿ ತೋರಿಸಿದ ಟ್ಯೂನ್‌ನ ತತ್ಕಾರಗಳನ್ನು ಬರೆದು ಮೊದಲ ಸಾಲು ಅವರ ಮುಂದೆಯೇ ಬರೆದೆ. ಅವರಿಗೆ ಅದು ಇಷ್ಟವಾಯ್ತು. ಉಳಿದ ಸಾಲುಗಳನ್ನು ಸುಂದರ್‌ನಾಥ್ ಸುವರ್ಣರ ರೂಮಲ್ಲಿ ಕುಳಿತು ಬರೆದೆ. ಆ ರೂಮಲ್ಲಿ ಆಗ ಸಹ ನಿರ್ದೇಶಕ ಎಡನೀರು ಬಾಲಕೃಷ್ಣ ಅವರೂ ಇದ್ದರು.

ಮರುದಿನ ಹಾಡು ಮುಗಿಸಿ ಕಾಶಿಯವರಿಗೆ ತೋರಿಸಿದಾಗ ಅವರು ಅದನ್ನು ಓದಿ ಇಷ್ಟಪಟ್ಟರು. ಇನ್ನೂ ಒಂದು ಹಾಡನ್ನು ಬರೆಯಲು ಹೇಳಿದರು. ಅದು ಒಂದು ಪ್ರೇಮ –ಕಾಮ ಗೀತೆ. ಆ ಹಾಡು ಬರೆಯಲು ನಾನು ಕೊಕ್ಕೋಕನ 'ಕಾಮಶಾಸ್ತ್ರ' ಪುಸ್ತಕ ಓದಬೇಕಾಯ್ತು! 'ಅನುಭವ'ದಲ್ಲಿ ಇದ್ದದ್ದೇ ಎರಡು ಹಾಡು– ಅವೆರಡೂ ನನ್ನ ಪಾಲಿಗೆ ಬಂದ ಭಾಗ್ಯ. ಚಿತ್ರ ಬಿಡುಗಡೆಯಾದ ಮೇಲೆ 'ಸೂಪರ್‌ಹಿಟ್' ಆದವರು ಕಾಶಿನಾಥ್, ಉಮಾಶ್ರೀ, ಅಭಿನಯ, ಅರವಿಂದ್ ಮತ್ತು ನಾನು. ಆದರೆ ನಾನು ಯಾರೆಂದು ಆಗ ಯಾರಿಗೂ ಗೊತ್ತಿಲ್ಲ. ನಾನು ಬರೆದ ಹಾಡು ಮಾತ್ರ ನಿರಂತರ ಎರಡು ವರ್ಷ ಪ್ರತಿನಿತ್ಯ ಆಕಾಶವಾಣಿಯಲ್ಲಿ ಮೊಳಗಿತು!

ನಿರ್ದೇಶಕನಾಗಲು ಚಿತ್ರರಂಗಕ್ಕೆ ಬಂದ ನಾನು ಹೀಗೆ ಕಾಶಿಯವರ ಸಂಗದಿಂದಾಗಿ ಚಿತ್ರ ಸಾಹಿತಿಯಾದೆ. ಒಂದು ದಿನ ಕಾಶಿಯವರಲ್ಲಿ ಕೇಳಿದೆ: 'ಸರ್, ನಿಮ್ಮ ಸಹಾಯಕನಾಗಿ ಕೆಲಸ ಮಾಡುವ ಆಸೆ. ಕೆಲಸ ಕೊಡ್ತೀರಾ?' ಕಾಶಿಯವರು ಒಪ್ಪಿಕೊಂಡು 'ಅನಾಮಿಕಾ' ಚಿತ್ರಕ್ಕೆ ನನ್ನನ್ನು ಕ್ಲಾಪ್‌ಬಾಯ್ ಆಗಿ ಸೇರಿಸಿಕೊಂಡರು. ಆ ಚಿತ್ರದ ಮೂಲಕ ಜಾದೂಗಾರ ಓಂ ಗಣೇಶ್, ಅಶೋಕ್ ನಿಟ್ಟೂರ್ ಪರಿಚಯವಾಯ್ತು. ಆದರೆ ಆ ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸು ತರಲಿಲ್ಲ. ಸೋಲನೆಂದೂ ಕಾಣದ ಕಾಶಿಯವರಿಗೆ ಇದು ಕೊರೆಯತೊಡಗಿತು. ಆಗ ಅವರು ಈ ಬಾರಿ ಗೆಲ್ಲಲೇಬೇಕೆಂದು ಹೊಸ ಕಥೆ ಹೆಣೆಯತೊಡಗಿದರು.

'ಅನಂತನ ಅವಾಂತರ' ಸಿನಿಮಾದಲ್ಲಿ ಅಂಜಲಿ, ಮಲ್ಲಿಕಾ ಮತ್ತು ಎಂ.ಎನ್.ಲಕ್ಷ್ಮೀದೇವಿ ಅಭಿನಯ. ಉಪೇಂದ್ರ ಆಗಿನ್ನೂ ಕಾಲೇಜ್ ಹುಡುಗ. ನಾವು 'ಅನಂತನ ಅವಾಂತರ' ಚಿತ್ರಕಥೆ ಚರ್ಚೆಯಲ್ಲಿ ತೊಡಗಿದಾಗ ಕಾಲೇಜು

**(43ನೇ ಪುಟ ನೋಡಿ)**